# ಎದೆಯ ಭಾವಗಳಿಗೆಲ್ಲ ಈಗ ಮಾತು ಬಂದಿದೆ...

ಲಿಫ್ಟ್ ನ ಬಾಗಿಲು ತೆರೆದುಕೊಂಡು ನಾನೂ ಇವಳೂ ಹದಿಮೂರನೇ ಮಹಡಿಗೆ ಕಾಲಿಟ್ಟೆವು, ನಮ್ಮ ಹಿಂದೆ ಮೂವತ್ತೈದು-ನಾಲ್ವತ್ತರ ನಡುವಿನ ನಡುವಯಸ್ಕ ಅಪರಿಚಿತ. ಲಿಫ್ಟಿನಲ್ಲಿ ನೆಲಮಹಡಿಯಿಂದ ನಾವು ಮೂವರೇ ಇದ್ದೆವು. ಅವನು ಇವಳ ತರಲೆಗಳಿಗೆಲ್ಲ ನಸುನಗುತ್ತಿದ್ದ. ಇವಳು ಲಿಫ್ಟಿನಲ್ಲಿ ನಾವಿಬ್ಬರಲ್ಲದೇ ಅಪರಿಚಿತನಾದ ಅವನೂ ಇದ್ದಾನೆ ಎಂಬುದನ್ನು ಮರೆತವಳಂತೆ ತರಲೆಯಾಟ ಆಡಿದ್ದಳು, ಮತ್ತೇನೂ ಮಾಡಲಾಗದೇ ನಾನು ಮೂತಿ ಕೆಂಪು ಮಾಡಿಕೊಂಡಿದ್ದೆ...

ಲಿಫ್ಟಿನಿಂದ ಹೊರಬಂದು ನಮ್ಮೊಂದಿಗಿದ್ದ ಅಪರಿಚಿತನನ್ನು ಮುಂದೆ ಹೋಗಲು ಬಿಟ್ಟು ಇವಳು ನನ್ನ ಕಿವಿ ಹಿಂಡಿದಳು, ನಾನು 'ಹಾ' ಎಂದೆ. ಸಧ್ಯ! ನಮ್ಮ ಮುಂದೆ ಸಾಗುತ್ತಿದ್ದವನು ಹಿಂದಿರುಗಿ ನೋಡಲಿಲ್ಲ.

"ಏನೇ?"

"ಒಂದ್ವಿಷ್ಯಾ ಹೇಳಲಾ?"

"ಹೂಂ"

"ನಾನೇನಾದ್ರೂ ನಿನಗೆ ಸಿಗಲ್ಲಿಲ್ಲಾಂದ್ರೆ, ಇನ್ನೊತ್-ಹದಿನೈದು ವರ್ಷಕ್ಕೆ ನೀನೂ ಹೀಗೆ ಆಗಿರ್ತಿದ್ದೆ" ನಮ್ಮ ಮುಂದೆ ಹೋಗುತ್ತಿದ್ದ ಆ ಅಪರಿಚಿತನೆಡೆಗೆ ಕೈ ತೋರಿದಳು.

"ಏನು? ಯಾಕೆ?"

"ನೋಡು, ಅವನು ಈಗ್ಲೇ ಫಾರ್ಟಿ ಪ್ಲಸ್; ಫಾರ್ಟಿ ಪ್ಲಸ್ ಅಂಡ್ ಸಿಂಗಲ್!"

"ಫಾರ್ಟಿ ಪ್ಲಸ್ ಓಕೆ, ಆದ್ರೆ ಸಿಂಗಲ್ ಅಂತಾ ಹೇಗೆ ಗೊತ್ತು ನಿಂಗೆ?"

"ನೋಡಿದ್ರೇ ಗೊತ್ತಾಗುತ್ತೆ. ಇವತ್ತು ವರ್ಕಿಂಗ್ ಡೇ, ಒಬ್ಬನೇ ಒಂದು ಸಣ್ಣ ಬ್ಯಾಗ್ ತಗುಲುಹಾಕಿಕೊಂಡು 'ವಂಡರ್-ಲಾ'ಗೆ ಬಂದಿದಾನೆ. ಮದುವೆಯಾಗಿದ್ದಿದ್ರೆ ಹೆಂಡತಿ-ಮಕ್ಕಳನ್ನ ಕಟ್ಕೊಂಡು ವಾರಾಂತ್ಯಕ್ಕೆ ಬರ್ತಿರ್ಲಿಲ್ವಾ? ಪ್ರೇಯಸಿ ಇದ್ದಿದ್ರೆ ವರ್ಕಿಂಗ್ ಡೇ ದಿನವಾದ್ರೂ ಕಳ್ಳಾಟ ಆಡೋಣ ಅಂತಾ ಅವಳ ಜೊತೆಗೆ ಬರ್ತಿರಲಿಲ್ವಾ, ನಮ್ಮ ಥರಾ?" ನಾವಿಬ್ಬರೂ ಗಹಗಹಿಸಿ ನಕ್ಕೆವು. ಮುಂದೆ ಸ್ವಲ್ಪ ದೂರದಲ್ಲೆ ಹೋಗುತ್ತಿದ್ದ ಅವನು ನಮ್ಮ ತರಲೆಯೆಲ್ಲ ತಿಳಿದವನಂತೆ ಸಭ್ಯಸ್ತನಂತೆ ಹಿಂದಿರುಗಿ ನೋಡಲೇ ಇಲ್ಲ.

"ಅದ್ಸರಿ, ಆದ್ರೆ ನೀನು ಸಿಗದೇ ಇದ್ದಿದ್ದರೆ ಇನ್ನೈದು ವರ್ಷದಲ್ಲಿ ನಾನು ಇವನ ಹಾಗೆ ಆಗ್ತಿದ್ದೆ ಅಂದ್ರೆ ಏನರ್ಥ?" ನಾನೇ ಕೇಳಿದೆ.

"ಅಂದ್ರೇ.." ಅವಳು ಪ್ರತಿಯೊಂದು ಪದವನ್ನೂ ಸಾವಕಾಶವಾಗಿ ಬಿಡಿಸಿ ಹೇಳಿದಳು, "ನಾನು ನಿನ್ನ ಜೀವನದಲ್ಲಿ ಬರದೇ ಇದ್ದಿದ್ರೆ ನೀನಾಗೇ-ನೀನು ಯಾವ ಹುಡುಗಿಯನ್ನೂ ಪ್ರೇಮಿಸೋಕ್ಕಾಗ್ತಾ ಇರ್ಲಿಲ್ಲ. ಜೊತೆಗೆ ನಿನ್ನ ಚಾಯ್ಸ್-ಗಳೆಲ್ಲ ಎಷ್ಟು ಕೆಟ್ಟವೂಂತ ನನಗೆ ಗೊತ್ತಲ್ಲಾ. ಸೋ, ನೀನೂ ಫಾರ್ಟಿ ಪ್ಲಸ್ ಅಂಡ್ ಸಿಂಗಲ್ ಆಗೇ ಇರ್ತಿದ್ದೆ!"

"ಹೌದು ನನ್ನ ಚಾಯ್ಸ್ ಎಷ್ಟು ಕೆಟ್ಟದ್ದು ಅಂತಾ ನಿನ್ನ ನೋಡಿದ್ರೇ ಗೊತ್ತಾಗುತ್ತೆ!" ನಾನು ತಿರುಗೇಟು ಕೊಟ್ಟೆ, ಅವಳು ಸಿಟ್ಟಿಗೇಳಲಿಲ್ಲ, ನಕ್ಕಳು. "ಹೌದು ನಿನ್ನ ಚಾಯ್ಸ್ ಎಷ್ಟು ಕೆಟ್ಟದಾಗಿದ್ರೇನಂತೆ, ನನ್ನ ಚಾಯ್ಸ್ ತುಂಬಾನೆ ಚೆನ್ನಾಗಿರುತ್ತೆ" ನನ್ನ ಸೊಂಟಕ್ಕೆ ಕೈ ಹಾಕಿ ಹತ್ತಿರಕ್ಕೆಳೆದುಕೊಂಡಳು, "...ಮರಿಬೇಡ, ಐ ಚೋಸ್ ಯು, ನಾಟ್ ದಟ್ ಯು ಚೋಸ್ ಮಿ!" ನೆನೆದು ಮೈಗೆ ಅಂಟಿಕೊಂಡಿದ್ದ ನನ್ನ ಟೀಶರ್ಟಿನ ಮೇಲೆ, ನನ್ನ ಬಲ-ಸೊಂಟದ ಮಾಂಸಲಭಾಗದಲ್ಲಿ ಅವಳು ಬಲವಾಗಿ ಚಿವುಟಿದಳು, ನಾನು "ಔಚ್!" ಎಂದೆ. ಅವಳು ಮೆಲ್ಲಗೆ ನನ್ನ ತಲೆಗೆ ತನ್ನ ತಲೆಯಿಂದ ಢೀ ಕೊಟ್ಟಳು, ನಾನು ಮತ್ತೆ ಕೆಂಪಗಾದೆ...

ಹದಿಮೂರನೇ ಮಹಡಿಯ ಹೊರಗಿದ್ದ, ಆಕಾಶಕ್ಕೆ ಚಾಚಿಕೊಂಡಿದ್ದ ದೊಡ್ಡ ಗಾಲಿಯ ಜೈಂಟ್-ವೀಲ್ ನಿಜವಾಗಿಯೂ ಬೃಹದಾಕಾರದಲ್ಲಿತ್ತು. ಜನರೇನೂ ಇರಲಿಲ್ಲ. ನಮಗಿಂತ ಮುಂದೆ ಬಂದಿದ್ದ ಅಪರಿಚಿತ ಜೈಂಟ್-ವೀಲಿನ ಸಣ್ಣ ಸಣ್ಣ ಪಂಜರಗಳಂತಿದ್ದ ಯಾವುದೋ ಒಂದು ತೊಟ್ಟಿಲಿನಲ್ಲಿ ಕುಳಿತ್ತಿದ್ದ ಅನ್ನಿಸುತ್ತೆ, ನಾವಿಬ್ಬರೂ ಇನ್ನೊಂದು ತೊಟ್ಟಿಲಿನೊಳಗೆ ಕುಳಿತೆವು. ನನ್ನ ಹೃದಯ ಭೂಮಿಯ ಮೇಲಿನಿಂದ ನಾವಿದ್ದ ಎತ್ತರವನ್ನು ಕಲ್ಪಿಸಿಕೊಳ್ಳುತ್ತಲೇ ಕಂಪಿಸಿತು. ನಾವಿಬ್ಬರೂ ಪಂಜರದಂತಿದ್ದ ತೊಟ್ಟಿಲಿನಲ್ಲಿ ಎದುರಾಬದುರಾಗಿ ಕುಳಿತೆವು. ಸಣ್ಣ ಕದಲಿಕೆಯೊಂದಿಗೆ ಜೈಂಟ್-ವೀಲ್ ನ ರಾಟೆ ತಿರುಗಲಾರಂಭಿಸಿ, ನಮ್ಮ ತೊಟ್ಟಿಲು ಆಕಾಶಕ್ಕೇರಲಾರಂಭಿಸಿತು....

ಸುಡು-ಸುಡುಬಿಸಿಲಿನ ಸಂಜೆ ಐದುವರೆಯ ಸಮಯ, ಇಡೀ 'ವಂಡರ್-ಲಾ'ದ ವಿಶಾಲವಾದ ಬಯಲು, ಅದರೊಳಗಿನ ವಿಧ-ವಿಧವಾದ ಸವಾರಿಗಳು, ನೀರಿನಾಟದ ಬಯಲುಗಳು, ಕೊಳವೆಗಳು, ಕಟ್ಟೋಣಗಳು, ಸಣ್ಣ-ಸಣ್ಣ ಬೊಂಬೆ ಮನೆಗಳಂತೆ ಕಾಣುತ್ತಿದ್ದವು. ಬಯಲಿನಾಚೆಗಿನ ಹೊಲಗದ್ದೆಗಳು, ಮನೆ-ಮಠ, ಹಳ್ಳಿ-ಊರುಗಳು, ಮೋಡಗಳಿಲ್ಲದ ಆಕಾಶ, ಸಂಜೆಬಾನಿನೆಡೆಗೆ ಸರಿದಿದ್ದ ಬೆವೆತ ಸೂರ್ಯ, ಹಕ್ಕಿಗಳು... ಇವಳು ಫಕ್ಕನೆ ನಕ್ಕಳು, ಏನೆಂಬಂತೆ ನಾನು ಇವಳೆಡೆಗೆ ನೋಡಿದೆ.

"ಯಾಕೆ ಇಷ್ಟೊಂದ್ ಹೆದರ್ಕೊಂಡಿದೀಯಾ?" ನಾವು ಕುಳಿತಿದ್ದ ತೊಟ್ಟಿಲಿನ ಅಂಚಿನ ಕಂಬಿಗಳನ್ನು ಎರಡೂ ಕೈಗಳಿಂದ ಭದ್ರವಾಗಿ ನಾನು ಹಿಡಿದುಕೊಂಡಿದ್ದು ನನ್ನ ಅರಿವಿಗೆ ಬಂತು. "ಈಗ ವೇಗ-ಪಡೆದುಕೊಳ್ಳುತ್ತೆ ಅನ್ಸುತ್ತೆ!"

"ಸ್ಟುಪಿಡ್! ಜೈಂಟ್ ವೀಲ್ ಯಾವಾಗ್ಲೂ ಇದೇ ವೇಗದಲ್ಲಿರುತ್ತೆ, ಇದಕ್ಕಿಂತ ಫಾಸ್ಟ್ ಆಗಲ್ಲ. ಸೊ, ಆ ಕೈಗಳನ್ನ ಬಿಟ್ಟುಬಿಡು" ನನ್ನ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡಳು, ನಾನು ಅವಳ ಕೈಬೆರಳುಗಳಿಗೆ ನನ್ನವುಗಳನ್ನು ಹೆಣೆದುಕೊಂಡೆ. ನಾವಿಬ್ಬರೂ ನಮ್ಮಿಂದ ನೂರಾರು ಅಡಿಗಳಷ್ಟು ಕೆಳಗೆ ಕಾಣುತ್ತಿದ್ದ ದೃಶ್ಯಾವಳಿಗಳ ಬಗ್ಗೆ ಮಾತನಾಡಲಾರಂಭಿಸಿದೆವು. ವಂಡರ್-ಲಾದ 'ಇನ್ಸಾನಿಟಿ'ಯಲ್ಲಿ ಕುಳಿತವರ ಬೊಬ್ಬೆ, ಅಬ್ಬರ, ನಗು, ಕೇಕೆ, ಚೀರಾಟ ಕೇಳುತ್ತಿತ್ತು, ಮತ್ತ್ಯಾವುದೋ 'ರೈಡ್'ನ ರಾಟೆಯ ಶಬ್ದ, ಕೃತಕ ಸಮುದ್ರದ ಅಲೆಗಳ ಭೋರ್ಗರೆತ, ಯಾರೋ ಚೀರಿದ್ದು, ಯಾರೋ ನಗುತ್ತಿರುವುದು, ದೂರದ ಮೈಸೂರು-ಬೆಂಗಳೂರು ಹೆದ್ದಾರಿಯ ವಾಹನಗಳ ಭರಾಟೆಯ ಕ್ಷೀಣ-ಶಬ್ದ...

"ಈಗೇನಾದ್ರೂ ಮಾಡೋಣ್ವಾ?"

"ಏನಾದ್ರೂ ಅಂದ್ರೆ?"

"ಈ ಜೈಂಟ್-ವೀಲ್ ರೈಡ್ ಸದಾ ನಮ್ಮ ನೆನಪಿನಲ್ಲಿರ್ಲೋ ಥರಾ?"

"ಹ್ಮ್... ಏನ್ಮಾಡೋಣ, ಇಲ್ಲಿಂದ ಜಂಪ್ ಮಾಡೋಣ್ವಾ?" ಅವಳು ನಕ್ಕಳು

"ಇಲ್ಲ, ನಮಗೂ ನೆನಪಿರೋಥರ ಏನಾದ್ರೂ ಮಾಡೋಣ, ಜಂಪ್ ಮಾಡಿದ್ರೆ ನಮಗೆ ನೆನಪಿರೋಲ್ಲ, ಉಳಿದವರಿಗೆಲ್ಲ ನೆನಪುಳಿಯುತ್ತೆ!" ನಾನು ಅವಳ ತರ್ಕಕ್ಕೆ ತಲೆದೂಗಿದೆ.

"ಹೇಳು, ಇದೂವರೆಗೂ ನೀನು ನನಗೆ ಎಲ್ಲೆಲ್ಲಿ ಮುತ್ತಿಟ್ಟಿದೀಯಾ?"

"ಎಲ್ಲೆಲ್ಲಿ ಅಂದ್ರೆ, ತುಟಿ, ಕೆನ್ನೆ, ಹಣೆ, ನಿನ್ನ ಕತ್ತು..."

ನನ್ನ ಕೆನ್ನೆಗೆ ಮೃದುವಾಗಿ ಹೊಡೆದು ಅವಳು ನನ್ನ ತಡೆದಳು, "ಅದಲ್ಲ ಸ್ಟುಪಿಡ್! ನಾವಿಬ್ರೂ ಯಾವ ಯಾವ ಜಾಗದಲ್ಲಿ ಮುತ್ತಿಟ್ಕೊಂಡಿದೀವಿ ಅಂತಾ ಗೊತ್ತಾ?"

"ಗೊತ್ತು, ಯಾಕೆ?"

"ಸರಿ, ಇವಾಗ 'ಲೆಟಸ್ ಕಿಸ್' ಜೈಂಟ್ ವೀಲ್ ಮೇಲೆ ಕಿಸ್ ಮಾಡೋಣ" ನಾನು ಅವಳ ಪಕ್ಕಕ್ಕೆ ಕೂರಲು ಎದ್ದೆ, ಇವಳು "ಬೇಡ ಹೀಗೇ ನನ್ನೆದುರಿಗೇ ಕೂತ್ಕೋ" ಅಂದು ನನ್ನ ಭುಜಗಳ ಮೇಲೆ ಕೈಗಳನಿಟ್ಟು ಕಣ್ಣು ಮುಚ್ಚಿ ತುಟಿ ಮುಂದೆ ಮಾಡಿದಳು.

ನಾನೂ ಇವಳ ಭುಜಗಳ ಮೇಲೆ ನನ್ನ ಕೈಗಳನ್ನಿಟ್ಟು ಇವಳ ಮುಖವನ್ನೇ ನೋಡಿದೆ. ಸಂಜೆಬಿಸಿಲಿನಲ್ಲಿ ಅವಳು ಹೊಳೆಯುತ್ತಿದ್ದಳು, 'ವಂಡರ್-ಲಾ' ದ ನೀರಿನಾಟಗಳಲ್ಲಿ ನೆನೆದು-ಒಣಗುತ್ತಿದ್ದ ತಲೆಗೂದಲು, ಸದಾ ಕಿವಿಯ ಹಿಂದಕ್ಕೆ ಸಿಕ್ಕಿಸಿಕೊಳ್ಳುತ್ತಿದ್ದರೂ ಮತ್ತೆ ಪುಂಡನಂತೆ ಬಂದು ಅವಳ ಮೂಗಿಗೆ ಮುತ್ತಿಕ್ಕುತ್ತಿದ್ದ ಮುಂಗುರುಳಿನ ಎಳೆ, ಸ್ವಲ್ಪವೇ ಸ್ವಲ್ಪ ಬೆವೆತಿದ್ದ ಹಣೆ-ಮೇಲ್ದುಟಿಯ ಮೇಲ್ಭಾಗ, ಸಣ್ಣ ಮಕ್ಕಳು ಸಿಟ್ಟು ಮಾಡಿಕೊಂಡಾಗ ತುಟಿಯೂದಿಸುವಂತೆ ಮಾಡಿಕೊಂಡಿದ್ದ ಗುಲಾಬಿ ತುಟಿಗಳು, ತುಟಿಯ ಕೆಳಗಡೆ ಬಲಭಾಗದಲ್ಲಿ ಜೇನು ಬಣ್ಣದ ಸಣ್ಣ ಗೀರು, ನಾನು ನೋಡುತ್ತಲೇ ಇದ್ದೆ, ಅವಳು ತನ್ನ ಎಡಗಣ್ಣು ತೆರೆದು ಮೆಲ್ಲನೇ ನನ್ನ ನೋಡಿ, ಮತ್ತೆ ಕಣ್ಣು ಮುಚ್ಚಿದಳು, ನಾನು ಮೆಲ್ಲನೆ ಅವಳನ್ನು ನೋಡುತ್ತಿದ್ದ ನನ್ನ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತ ತುಟಿ ಮುಂದೆ ಮಾಡಿದೆ...

ನನ್ನ ತುಟಿಗಳೇ ಅದುರುತಿದ್ದವೋ, ಅಥವಾ ಅವಳ ತುಟಿಗಳ ಅದುರುವಿಕೆಯೇ ಮುತ್ತಿನ ಸ್ಪರ್ಶದಿಂದ ನನ್ನ ತುಟಿಗಳಿಗೆ ರವಾನೆಯಾಯಿತೋ ಗೊತ್ತಿಲ್ಲ, ತುಟಿಗಳ ಅದುರುವಿಕೆ ಮೆಲ್ಲನೆ ನನ್ನ ಮುಖವನ್ನೆಲ್ಲ ಝುಮ್ಮೆನ್ನಿಸಿ, ಕಂಪನವನ್ನು ಹುಟ್ಟಿಸಿ, ಆ ನವಿರಾದ ಕಂಪನ ಸಮುದ್ರದಲೆಯಂತೆ ಎದೆಯನ್ನೆಲ್ಲ ಆವರಿಸಿ, ನನ್ನೆದೆಯ ಬಡಿತವನ್ನು ತಾರಕಕ್ಕೇರಿಸಿ, ಮೈ ಬಿಸಿಯಾಗಿಸಿ, ಹೊಕ್ಕುಳದಾಳಕ್ಕೆ ಇಳಿದು ಝೇಂಕರಿಸಿ, ಇನ್ನೂ ಕೆಳಕ್ಕಿಳಿದು ಪಾದಾಂಗುಲಿಯನ್ನೂ ತಲುಪಿ... ನನ್ನಿಡೀ ದೇಹ ಹಗುರವಾಗಿ ನಾನು ಮೆಲ್ಲನೆ ನನ್ನ ಕತ್ತನ್ನು ಬಲಕ್ಕೆ ವಾಲಿಸಿದೆ, ಅವಳೂ ಅದುರಿದಳು, ದೀರ್ಘವಾದ ನಿಟ್ಟುಸಿರು ಬಿಟ್ಟು ಕತ್ತನ್ನು ವಾಲಿಸಿದಳು. ನಾನು ಅವಳ ಕೆಳದುಟಿಯನ್ನೂ, ಅದರ ಕೆಳಗಿದ್ದ ಜೇನ ಬಣ್ಣದ ಆ ಗೀರನ್ನೂ ಸೇರಿಸಿ ಮೆಲ್ಲನೆ ನನ್ನ ತುಟಿಗಳಿಂದ ಆವರಿಸಿಕೊಂಡೆ. ನನ್ನ ಕೈಗಳು ಅವಳ ತಲೆಯನ್ನು ಹಿಮ್ಮೆಟ್ಟದಂತೆ ಹಿಡಿದುಕೊಂಡವು...

ಸಂಜೆಬಿಸಿಲಿನ ತಾಪವೂ ಮೆಲ್ಲನೆ ಕರಗಿ, ಮುಚ್ಚಿದ್ದ ಕಣ್ಣ ರೆಪ್ಪೆಯ ಹಿಂದಿನ ಬೆಳಕೂ ಕರಗಿ ಕತ್ತಲಾಗಿ, ಎಲ್ಲ ಶಬ್ದಗಳೂ ಒಂದಾಗಿ ಕಿವಿಯಲ್ಲಿ ಗುಂಯ್-ಗುಟ್ಟಿ, ಕ್ಷೀಣವಾಗಿ, ನಿಶ್ಯಬ್ದವಾಗಿ ಆ ನಿಶ್ಯಬ್ದ ನೀರವತೆಯಲ್ಲಿ ನನ್ನ ಅನುಭೂತಿಗೆ ನಿಲುಕಿದ್ದು ಕೇವಲ ನನ್ನ ಮತ್ತು ಅವಳ ಹೃದಯದ ಬಡಿತದ ಶಬ್ದ ಮಾತ್ರ...

'ಜೈಂಟ್ ವೀಲ್'ನಿಂದ ಕೆಳಕ್ಕಿಳಿದಾಗ ನಮಗಿಂತ ಮೊದಲೇ ಇಳಿದಿದ್ದ ಆ ಅಪರಿಚಿತ ಎಲ್ಲ ತಿಳಿದವನಂತೆ ಅಪ್ಯಾಯತೆಯ ನಗು ನಗುತ್ತಿದ್ದ, ಈಗ ನಾವಿಬ್ಬರೂ ಕೆಂಪಗಾಗಿದ್ದೆವು!

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** shivuks@gmail.com